ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

ESTD - 1964

ಸುವರ್ಣಮಹೋತ್ಸವ 50 ವರ್ಷಗಳು

ಊಟಿರಸ್ತೆ, ಮೈಸೂರು-೫೭೦ ೦೨೫

☎ 0821-2548236 & 2548380 Fax: 0821-2548238 E-mail: jssautonomous@gmail.com


ದಿನಾಂಕ : ೦೮.೦೫.೨೦೧೭

<u>ಪ್ರಕಟಣೆಯ ಕೃಪೆಗಾಗಿ</u>

## 'ಭಾಷಾಕಲಿಕೆ ಕೇವಲ ಸಂವಹನಕ್ಕಾಗಿ ಅಲ್ಲ, ಜೀವನಮೌಲ್ಯಕ್ಕಾಗಿ'

**–ವಸುಧೇಂದ್ರ, ಸಾಹಿತಿಗಳು**

"ಬದಲಾವಣೆಯೇ ಜಗದ ನಿಯಮ; ಅಂತರಂಗದ ಪ್ರಾಮಾಣಿಕತೆಯೇ ಬದಲಾವಣೆಗೆ ಮೂಲ; ಅದಕ್ಕೆ ವಚನ ಸಾಹಿತ್ಯವು ಶ್ರೇಷ್ಠ ಉದಾಹರಣೆ" – ಎಂದು ಇಂದಿನ ಹೊಸ ತಲೆಮಾರಿನ ಪ್ರಸಿದ್ಧ ಸೃಜನಶೀಲ ಬರಹಗಾರರಾದ ವಸುಧೇಂದ್ರರವರು ತಮ್ಮ 'ಐದು ಪೈಸೆ ವರದಕ್ಷಿಣೆ' ಎಂಬ ಲಲಿತ ಪ್ರಬಂಧ ಕೃತಿಯನ್ನು ಕುರಿತ 'ವಿದ್ಯಾರ್ಥಿಕೇಂದ್ರಿತ ವಿಚಾರಗೋಷ್ಠಿ–ನನ್ನ ನೋಟ' ಕಾರ್ಯಕ್ರಮದಲ್ಲಿ ಹೇಳಿದರು. ಅವರು ಮೈಸೂರಿನ ಊಟಿರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳೊಂದಿಗೆ ಸಾಹಿತ್ಯಕ ಸಂವಾದ ನಡೆಸಿ ವೈಯಕ್ತಿಕ ಅನುಭವಗಳನ್ನು ಹಂಚಿಕೊಳ್ಳುತ್ತಾ "ಸಾರ್ವತ್ರಿಕತೆಯನ್ನು ಪಡೆದುಕೊಳ್ಳುವುದೇ ಸಾಹಿತ್ಯದ ಲಕ್ಷಣ; ಭಾಷೆ ಕೇವಲ ಸಂವಹನಕ್ಕಾಗಿ ಅಲ್ಲ ಅದು ಜೀವನ ಮೌಲ್ಯದ ಕಲಿಕೆಗಾಗಿ ಮತ್ತು ಪರಿಪೂರ್ಣ ವ್ಯಕ್ತಿತ್ವದ ವಿಕಾಸಕ್ಕಾಗಿ; ಆದ್ದರಿಂದ ಮಾತೃಭಾಷಾ ಅಧ್ಯಯನ ಎಲ್ಲರಿಗೂ ಕಡ್ಡಾಯವಾಗಬೇಕು. ಸಾಂಸ್ಕೃತಿಕ ಸಂಘರ್ಷದಲ್ಲಿ ಅನುಭವಿಸುವ ತಲ್ಲಣಗಳ ಅಭಿವ್ಯಕ್ತಿ ತಮ್ಮ ಸಾಹಿತ್ಯದಲ್ಲಿದೆ"– ಎಂದು ಅಭಿಪ್ರಾಯಪಟ್ಟರು.

ಪ್ರಥಮ ಎಂ.ಎ ವಿದ್ಯಾರ್ಥಿ ಗಿರೀಶ್.ಬಿ ಕೃತಿಯನ್ನು ಕುರಿತು ಪ್ರಬಂಧ ಮಂಡಿಸಿದರು. ವಿಭಾಗದ ಸಂಯೋಜಕರು ಡಾ. ಎಚ್.ಟಿ. ಶೈಲಜ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಸಂಚಾಲಕರು ಡಾ. ಬಿ.ಎಸ್.ಸುದೀಪ್, ವಿಭಾಗದ ಪ್ರಾಧ್ಯಾಪಕರುಗಳಾದ ಡಾ. ಬಿ. ಪ್ರಭುಸ್ವಾಮಿ, ಡಾ.ಎನ್.ಎಂ.ಗಿರಿಜಾಪತಿ ಉಪಸ್ಥಿತರಿದ್ದರು. ಸಂಶೋಧನಾ ವಿದ್ಯಾರ್ಥಿ ಮಲ್ಲಿಕಾರ್ಜುನ.ಎಚ್.ಎಂ ಪ್ರಾರ್ಥಿಸಿದರು. ದ್ವಿತೀಯ ಎಂ.ಎ ವಿದ್ಯಾರ್ಥಿನಿ ಚೈತ್ರ ಪ್ರಾಸ್ತಾವಿಕ ಹಾಗೂ ಸ್ವಾಗತ ನುಡಿಗಳನ್ನಾಡಿದರು. ಪ್ರಥಮ ಎಂ.ಎ. ವಿದ್ಯಾರ್ಥಿನಿ ಪ್ರತಿಮಾ ವಂದಿಸಿದರು. ಪ್ರಥಮ ಎಂ.ಎ. ವಿದ್ಯಾರ್ಥಿ ಪ್ರೇಮ್‌ಕುಮಾರ್ ನಿರೂಪಿಸಿದರು.

ಗೆ.

________________

________________

ಪ್ರಾಂಶುಪಾಲರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಊಟಿ ರಸ್ತೆ, ಮೈಸೂರು–25